# ನವರಾತ್ರಿ ಸಂಭ್ರಮಕ್ಕೆ ಉಡುಪು, ಒಡವೆ..



ನಾಡಹಬ್ಬ ಶರನ್ನವರಾತ್ರಿಗೂ ಫ್ಯಾಷನ್‌ಗೂ ನಂಟಿದೆ ಎಂಬುದು ನಿಜ. ನವರಾತ್ರಿ ಹಬ್ಬದ ಆಚರಣೆಗಾಗಿಯೇ ಫ್ಯಾಷನೆಬಲ್ ಉಡುಗೆ, ಒಡವೆ, ಆ್ಯಸೆಸ್ಸರೀಸ್ ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದು ಸಂಪ್ರದಾಯದ ಜತೆಗೆ ಆಧುನಿಕತೆಯೂ ಮೇಳೈಸಿ ಹಬ್ಬದ ಸಂಭ್ರಮ ಇಮ್ಮಡಿಸುತ್ತಿದೆ. ಇದರೊಂದಿಗೆ ಎಥ್ನಿಕ್ ಉಡುಪುಗಳೂ ಸೇರಿ ನವರಾತ್ರಿಗೆ ವಿಶೇಷ ಕಳೆ ಕಟ್ಟುತ್ತಿದೆ.

■ ಉಮಾ ಅನಂತ್



ಫ್ಯಾಷನ್ ಹಬ್ಬಗಳೊಂದಿಗೆ ಸದಾ ಅವಿನಾಭಾವ ಸಂಬಂಧವನ್ನೇ ಬೆಸೆಯುತ್ತಿದೆ. ಹಬ್ಬಗಳಲ್ಲಿ ಸಾಂಪ್ರದಾಯಿಕತೆಯೇ ಮೇಲುಗೈ ಸಾಧಿಸಿದರೂ ಆಧುನಿಕ ಫ್ಯಾಷನ್ ಟ್ರೆಂಡ್‌ನೊಂದಿಗೆ ರಾಜಿಯಾಗದೆ ಎರಡೂ ಮನೋಭಾವದವರನ್ನೂ ಸಮಾನವಾಗಿ ಸೆಳೆಯುತ್ತಿದೆ. ಇದು ಉಡುಪೇ ಆಗಿರಬಹುದು, ಒಡವೆ, ಅಲಂಕಾರಿಕ ಸಾಧನಗಳೇ ಆಗಿರಬಹುದು. ಫ್ಯಾಷನ್ ಜಗತ್ತು ಎಲ್ಲರೊಳಗೊಂದಾಗುತ್ತಿದೆ.

ಸದ್ಯ ನವರಾತ್ರಿ ಹಬ್ಬದ ಸಡಗರ ನಾಡಿನೆಲ್ಲೆಡೆ ತುಂಬಿದೆ. ನವರಾತ್ರಿ ಹಬ್ಬದ ಸಂಭ್ರಮಾಚರಣೆಗಾಗಿಯೇ ಉಡುಪು, ಒಡವೆಗಳಲ್ಲಿ ಫ್ಯಾಷನೆಬಲ್ ಆಗಿರುವ ಉತ್ಪನ್ನಗಳು ಬಂದಿದ್ದು, ಫ್ಯಾಷನ್ ಟ್ರೆಂಡ್ ಆಗಿಯೂ ರೂಪುಗೊಂಡಿದೆ. ಸಾಮಾನ್ಯವಾಗಿ ಹಳ್ಳಿ, ಗ್ರಾಮಾಂತರ ಪ್ರದೇಶಗಳಲ್ಲಿ ನವರಾತ್ರಿಯ ಎಲ್ಲ ಒಂಬತ್ತು ದಿನಗಳಲ್ಲಿ ಜಾನಪದ ಹಾಡು, ನೃತ್ಯಗಳನ್ನು ಮಾಡುತ್ತಾ, ಇದಕ್ಕೆ ಸೂಕ್ತವಾದ ಫ್ಯಾಷನ್ ಉಡುಪುಗಳನ್ನು ತೊಟ್ಟು ಸಂಭ್ರಮಿಸುವುದು ವಾಡಿಕೆ.

ನವರಾತ್ರಿ ಸಂಭ್ರಮ ಇಮ್ಮಡಿಸುವುದು ಫ್ಯಾಷನೆಬಲ್ ಆಗಿರುವ ಉಡುಗೆ–ತೊಡುಗೆ, ಒಡವೆಗಳನ್ನು ಧರಿಸಿ ಮಿಂಚಿದಾಗಲೇ. ದೇವಾಲಯಗಳಲ್ಲಿ ಹಬ್ಬದ ದಿನಗಳು ಕಳೆ ಕಟ್ಟುತ್ತಿರುತ್ತದೆ. ಉತ್ತರ ಭಾರತದಲ್ಲಿ ದುರ್ಗಾ ಪೂಜೆ ಸೇರಿದಂತೆ ನವರಾತ್ರಿ ಸಂಭ್ರಮ ಜೋರು. 'ದಾಂಡಿಯಾ ರಾತ್ರಿಗಳು' ಎನ್ನಲಾಗುವ ಈ ದಿನಗಳಲ್ಲಿ ಮಹಿಳೆಯರು ಬಾಂದನಿ ಪ್ರಿಂಟ್ಸ್ ಇರುವ ಸ್ಕರ್ಟ್, ಸ್ಟೇಟ್‌ಮೆಂಟ್ ಆಭರಣ ಧರಿಸಿ ಮೆರೆಯುವುದು ಸಾಮಾನ್ಯ ದೃಶ್ಯ. ಇದೇ ದಿರಿಸಿನಲ್ಲಿ ನೃತ್ಯ ಮಾಡುವುದು ಕೂಡ ಹಬ್ಬದ ಒಂದು ಭಾಗವೇ. ಇದಕ್ಕಾಗಿಯೇ ಹಲವು ಉಡುಪು–ಒಡವೆ ಕಂಪೆನಿಗಳು ಫ್ಯಾಷನೆಬಲ್ ಉತ್ಪನ್ನಗಳನ್ನು ತಂದಿದ್ದು, ಆನ್‌ಲೈನ್ ಕಂಪೆನಿಗಳೂ ಪೈಪೋಟಿ ನಡೆಸಲು ಮುಂದಾಗಿವೆ.

ಸಾಮಾನ್ಯವಾಗಿ ಹಸಿರು–ಹಳದಿ ಪ್ರಿಂಟ್ಸ್ ಇರುವ ಬಾಂದನಿ ಉಡುಪುಗಳು, ಸ್ಲೀವ್‌ಲೆಸ್ ಸಾಲಿಡ್ ಬ್ಲ್ಯಾಕ್ ಕಲರ್ ಉಡುಪಿನ ಜತೆಗೆ ಸಿಲ್ವರ್ ಜಿಯೊಮೆಟ್ರಿಕ್ ಪ್ಯಾಟರ್ನ್ ಇರುವ ನೆಕ್‌ಪೀಸ್, ಸಿಲ್ವರ್ ಮೆಟಾಲಿಕ್

